**Witness present and duly sworn on 30.07.2024**
**Examination in chief by Advocate for Petitioner.**

I have filed my Affidavit in lieu of my Chief-examination. The contents of the said Affidavit are true to the best of my knowledge and have affixed my signatures after going through its contents.

The documents that are produced before the court are marked as Exhibits as:-

| | |
|---|---|
| Ex.P-1 | True copy of FIR |
| Ex.P-2 | True copy of complaint |
| Ex.P-3 | True copy of spot mahazar |
| Ex.P-4 | True copy of seizure mahzar |
| Ex.P-5 | True copy of IMV report |
| Ex.P-6 | True copy of spot sketch |
| Ex.P-7 | True copy of police intimation from the hospital |
| Ex.P-8 | True copy of Inquest report |
| Ex.P-9 | True copy of P.M. report |
| Ex.P-10 & 11 | True copy of notice and reply to notice under Sec.133MV Act |
| Ex.P-12 | True copy of charge sheet |
| Ex.P-13 & 14 | Notarized copy of Aadhar card of petitioner no.2 & 3(original perused and returned) |
| Ex.P-15 | Notarized copy of ration card (original perused and returned) |

**Further chief examination prays time. Granted.**

**(Computerised to my dictation in the Open Court).**

**R.O.I. & A.C.**

**IIAddl. Judge**

**Witness present and duly sworn on 14.08.2024**
**Further examination in chief by Advocate for Petitioner.**

The documents that are produced before the court are marked as Exhibits as:-

| | |
|---|---|
| Ex.P-16 | Notarized copy of Aadhar card of Pw-1 (After comparing the original found correct) |
| Ex.P-17 | Notarized copy of death certificate of deceased (After comparing the original found correct) |

**No representation of Respondents. To provide opportunity, the cross examination of Pw-1 is deferred.**

**(Computerised to my dictation in the Open Court).**

**R.O.I. & A.C.**

**IIAddl. Judge**

**ಸಾಕ್ಷಿಯನ್ನು ದಿನಾಂಕ: 25.09.2024 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು:** 1 ನೇ ಎದುರುದಾರರ ಪರ ವಕೀಲರಾದ ಶ್ರೀ ಬಿ.ಎ.. ರವರಿಂದಃ-

ಮೃತ ವ್ಯಕ್ತಿ ನನ್ನ ಗಂಡ. ಅವರು ಏನು ಓದಿಲ್ಲ. ಅವರು ಯಾವಾಗ ಹುಟ್ಟಿರುತ್ತಾರೆ ಎಂದು ದಾಖಲೆಗಳಿಲ್ಲ ಮೃತ ವ್ಯಕ್ತಿ ನನ್ನ ಗಂಡ ಎಂದು ತೋರಿಸಲು ಪಡಿತರ ಚೀಟಿ ಕೊಟ್ಟಿದ್ದೇನೆ. ಮೃತ ಪಡುವಾಗ ನನ್ನ ಗಂಡನಿಗೆ 50ವರ್ಷ ಆಗಿತ್ತು ಎಂದರೆ ಸರಿಯಲ್ಲ. ನನಗೆ ಇಬ್ಬರು ಮಕ್ಕಳು. ದೊಡ್ಡ ಮಗ 10ನೇ ತರಗತಿ, 2ನೇ ಮಗ 8ನೇ ತರಗತಿ. ನನ್ನ ಗಂಡ ಕೆಲಸಕ್ಕೆ ಹೋಗಿ ತಿಂಗಳಚಿಗೆ ರೂ.25,000/- ಸಂಪಾದಿಸುತ್ತಿದ್ದರು ಎಂದು ನ್ಯಾಯಾಲಯಕ್ಕೆ ಯೂವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ನನ್ನ ಗಂಡ ಗಾರೆ ಕೆಲಸಕ್ಕೆ ಹೋಗುತ್ತಿದ್ದರು. ಕೂಲಿ ಕೆಲಸ ಎಂದರೆ ಒಂದು ದಿನ ಕೆಲಸ ಇರುತ್ತದೆ ಒಂದು ಲನ ಇರುವುದಿಲ್ಲ ಎಂದರೆ ಸರಿ.

2. ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ಬಗ್ಗೆ ನನಗೆ ಪೊಲೀಸರು ಮಾಹಿತಿ ಕೊಟ್ಟರು. ಅಪಘಾತ 28.04.2023 ಆಗಿರುತ್ತದೆ. ನನಗೆ ಮೃತದೇಹವನ್ನು 30.04.2023ರಂದು ಕೊಟ್ಟರು, ಅದೇ ದಿನ ದೂರು ಕೂಟ್ಟೆವು. ನಾನೇ ದೂರು ಕೊಟ್ಟಿದ್ದು. ಮುಂದುವರೆದು ಆ್ಯಂಬುಲೆನ್ಸ್ ಚಾಲಕ ದೂರು ಕೊಟ್ಟರು ಎಂದು ನುಡಿದಿರುತ್ತಾರೆ. ದೂರಿನಲ್ಲಿ ಏನು ವಿಚಾರ ಇದೆ ಎಂದು ನನಗೆ ಗೊತ್ತಿಲ್ಲ. ದೂರಿನಲ್ಲಿ ಇಂತಹ ವಾಹನ ಇಂತಹ ವಾಹನಕ್ಕೆ ಡಿಕ್ಕಿಪಡಿಸಿತು ಎಂದು ಬರೆದಿಲ್ಲ ಮತ್ತು ದೂರುದಾರರು ಮೋಹನ್ ಬಾಬು ಅವರನ್ನು ನೋಡಿರುತ್ತೇನೆ ಎಂದೂ ಎಲ್ಲೂ ಬರೆದಿಲ್ಲ ಎಂದರೆ ಗೊತ್ತಿಲ್ಲ.

3. ಪೊಲೀಸರು ಮಹಜರಿಗೆ ಕರೆದಿದ್ದರು ಅದರೆ ನಾನು ಸಹಿ ಮಾಡಲಿಲ್ಲ. ನಾನು ಅಲ್ಲಿ ಹಾಜರಿದ್ದೆ ಎಂದು ಮಹಜರಿನಲ್ಲಿ ಬರೆದಿಲ್ಲ ಎಂದರೆ ಗೊತ್ತಿಲ್ಲ. ಇಂತಹದ್ದೇ ವಾಹನ ನನ್ನ ಗಂಡನ ವಾಹನಕ್ಕೆ ಡಿಕ್ಕಿಪಡಿಸಿತು ಎಂದು ನನಗೆ ತೋರಿಸಿಲ್ಲ. ವಾಹನ ಅಮಾನತ್ತು ಮಹಜರಿಗೂ ನನ್ನನ್ನು ಕರೆಸಿಲ್ಲ. ಎಷ್ಟು ದಿನಕ್ಕೆ ವಾಹನ ಸಿಕ್ಕಿತು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳನ್ನು ಓದಿ ತಿಳಿದುಕೊಂಡಿದ್ದೇನೆ. ಶಿವಗಂಗ ನನ್ನ ಗಂಡ ಎಂದು ತೋರಿಸಲು ನ್ಯಾಯಾಲಯಕ್ಕೆ ಯೂವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಶಿವಗಂಗ ನನ್ನ ಗಂಡ ಅಲ್ಲದಿದ್ದರೂ ಮತ್ತು ಇಂತದೇ ವಾಹನ ಅಪಘಾತಪಡಿಸಿದೆ ಎಂದು ಗೊತ್ತಿಲ್ಲದಿದ್ದರೂ ಸುಳ್ಳು ಪ್ರಕರಣ ಹಾಕಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ತಡವಾಗಿ ನೀಡಲು ಕಾರಣ ಬರೆದಿಲ್ಲ ಎಂದರೆ ಸರಿಯಲ್ಲ. ಗಾಡಿ ಯಾವ ರೀತಿ ಟ್ರೇಸ್ ಆಯಿತು ಎಂದು ಎಲ್ಲಾ

ಬರೆದಿಲ್ಲ, ಎಂದರೆ ಗೊತ್ತಿಲ್ಲ. ಇಂತಹದ್ದೇ ವಾಹನ ನನ್ನ ಗಂಡನ ವಾಹನಕ್ಕೆ ಡಿಕ್ಕಿಪಡಿಸಿತು ಎಂದು ಹೇಳಲು ಗೊತ್ತಾಗುವುದಿಲ್ಲ.

4. ಅಪಘಾತದ ಜಾಗವನ್ನು ನೋಡಿಲ್ಲ. ಅಪಘಾತವಾದಂತಹ ರಸ್ತೆ 80ಅಡಿ ರಸ್ತೆ ಎಂದರೆ ಹೌದು. ಸದರಿ ರಸ್ತೆ ಯಾವುದೇ ಅಪಘಾತವಾದಲರೂ ಸಹ ಇಂತಹ ವಾಹನವೇ ಗುದ್ದಿಕೊಂಡು ಹೋಯಿತು ಎಂದು ಗೊತ್ತಾಗುತ್ತದೆ ಎಂದರೆ ಹೌದು. ಅಪಘಾತವಾದಂತಹ ರಸ್ತೆ ಎನ್ ಹೆಚ್ 44ರಸ್ತೆ ಆಗಿರುವ ಕಾರಣ ಅಲ್ಲಿ ಸಿಸಿಟಿವಿ ಕ್ಯಾಮೆರಾ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ನಗರವಾದ ಕಾರಣ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿರುತ್ತಾರೆ ಎಂದರೆ ಗೊತ್ತಿಲ್ಲ.

5. ನನ್ನ ಮಕ್ಕಳು ದುಡಿಯುತ್ತಿದ್ದಾರೆ ನನಗೆ ಯೊವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಶವ ತನಿಖೆ ಮತ್ತು ಮರಣೋತ್ತರ ಪರೀಕ್ಷೆ ನಡೆಸುವಾಗ ಇಂತಹದೇ ವಾಹನ ಡಿಕ್ಕಿಪಡಿಸಿತು ಎಂದು ಗೊತ್ತಿರಲಿಲ್ಲ. ನನ್ನ ಗಂಡನಿಗೆ ಮದ್ಯಪಾನ ಮಾಡುವಂತಹ ಅಭ್ಯಾಸ ಇತ್ತು ಅವರೇ ಬಿದ್ದು ಮೃತಪಟ್ಟಿರುತ್ತಾರೆ ಆದರೆ ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಕಿದ್ದೇವೆ ಎಂದರೆ ಸರಿಯಲ್ಲ. ದೂರುದಾರರನ್ನು ಮತ್ತು ಪೊಲೀಸರನ್ನು ಕರೆಸಿ ಸಾಕ್ಷ್ಯ ಕೊಡಿಸಬಲ್ಲೆ. ನನ್ನ ಗಂಡನ ತಪ್ಪಿ ನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಂತ್ಯ ಸಂಸ್ಕಾರಕ್ಕೆ 2.5ಲಕ್ಷ ಖರ್ಚು ಆಗಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**2ನೇ ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**